## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆಃ 935/2019**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು ಃ

ಎ 1. ಜವರೇಗೌಡ,
ತಂದೆ - ಲೇಟ್ ಸಿದ್ದೇಗೌಡ
ಸುಮಾರು 36 ವರ್ಷ ವಯಸ್ಸು,

ಎ 2. ರವೀಂದ್ರಗೌಡ,
ತಂದೆ - ಪಾಪೇಗೌಡ
ಸುಮಾರು 40 ವರ್ಷ ವಯಸ್ಸು,

ಎ 3. ಕೃಷ್ಣೇಗೌಡ,
ತಂದೆ - ಚೋಡೇಗೌಡ
ಸುಮಾರು 55 ವರ್ಷ ವಯಸ್ಸು,

ಎ 4. ದೇವಮ್ಮ,
ಗಂಡ ಲೇಟ್ ಸಿದ್ದೇಗೌಡ
ಸುಮಾರು 62 ವರ್ಷ ವಯಸ್ಸು,

ಎ 5. ಸಣ್ಣತಾಯಮ್ಮ,
ತಂದೆ - ಪಾಪೇಗೌಡ
ಸುಮಾರು 60 ವರ್ಷ ವಯಸ್ಸು,

ಎಲ್ಲರೂ ಹಳೇಪುರ ಗ್ರಾಮದ
ವಾಸಿಗಳು, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀಮತಿ ಪೂಜಾ ಬೆಳಕೇರಿ, ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿನಾಂಕ **11.04.2018** ರಂದು ಬೆಳಿಗ್ಗೆ ಸುಮಾರು **7.30** ಗಂಟೆ ಸಮಯದಲ್ಲಿ ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಹಳೆಪುರ ಗ್ರಾಮದ ಸರ್ವೆ ನಂಬರ್ **35** ರಲ್ಲಿ ಸಾಕ್ಷಿ **1** ಮತ್ತು **4** ರವರು ಅನುಭವದಲ್ಲಿರುವ ಜಮೀನಿನಲ್ಲಿ ಸಾಕ್ಷಿ **1** ರವರು ಕೆಲಸ ಮಾಡುತ್ತಿದ್ದಾಗ **1** ರಿಂದ **5** ನೇ ಆರೋಪಿಗಳಾದ ನೀವುಗಳು ಕಾನೂನುಬಾಹಿರ ಸದಸ್ಯರಾಗಿದ್ದು**,** ಅಪರಾಧ ಎಸಗುವ ಸಮಾನ ಉದ್ದೇಶದಿಂದ ಸಾಕ್ಷಿ **1** ಅವರ ಬಳಿ ಇದು ನಮ್ಮ ಜಮೀನು ಯಾಕೆ ಉಳುಮೆ ಮಾಡುತ್ತಿದ್ದೀರ ಎಂದು ತಡೆದು ನಿಲ್ಲಿಸಿ ಅಕ್ರಮ ತಡೆಯನ್ನುಂಟುಮಾಡಿರುತ್ತೀರೆಂದು**,** ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **341** ಸಹವಾಚಕ ಕಲಂ **149** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ**?**

2. ಎರಡನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, **1** ರಿಂದ **5** ನೇ ಆರೋಪಿಗಳಾದ ನೀವುಗಳು ಕಾನೂನುಬಾಹಿರ ಸದಸ್ಯರಾಗಿದ್ದು**,** ಅಪರಾಧ ಎಸಗುವ ಸಮಾನ ಉದ್ದೇಶದಿಂದ ಸಾಕ್ಷಿ **1** ಅವರ ಜೊತೆ ತೀಟೆ ಜಗಳ ತೆಗೆದು ಬಾಯಿಗೆ ಬಂದ ಹಾಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರೆಂದು**,** ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **504** ಸಹವಾಚಕ ಕಲಂ **149** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

3**.** ಕೊನೆಯದಾಗಿ**,** ಮೇಲ್ಕಂಡ ಸ್ಥಳ**,** ದಿನಾಂಕ**,** ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ**, 1** ರಿಂದ **5** ನೇ ಆರೋಪಿಗಳಾದ ನೀವುಗಳು ಕಾನೂನುಬಾಹಿರ ಸದಸ್ಯರಾಗಿದ್ದು**,** ಅಪರಾಧ ಎಸಗುವ ಸಮಾನ ಉದ್ದೇಶದಿಂದ **1** ನೇ ಆರೋಪಿಯಾದ ನೀವು ಸಾಕ್ಷಿ **1** ಅವರ ಎಡತೊಡೆಗೆ ಮಾರಕಾಸ್ತ್ರವಾದ ಕುಡುಗೋಲಿನಿಂದ ಹೊಡೆದು ರಕ್ತ ಗಾಯ ಮಾಡಿದ್ದು**, 2** ನೇ

ಆರೋಪಿಯಾದ ನೀವು ಸಾಕ್ಷಿ **1** ಅವರಿಗೆ ಮಾರಕಾಸ್ತ್ರವಾದ ದೊಣ್ಣೆಯಿಂದ ಬಲ ತೊಡೆಗೆ ಹೊಡೆದು ನೋವುಂಟುಮಾಡಿದ್ದು ಹಾಗೂ **3** ನೇ ಆರೋಪಿಯಾದ ನೀವು ಸಾಕ್ಷಿ **1** ಅವರಿಗೆ ಮಾರಕಾಸ್ತ್ರವಾದ ಕಲ್ಲಿನಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿರುತ್ತೀರೆಂದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **324** ಸಹವಾಚಕ ಕಲಂ **149** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

(ಪೂಜಾ ಬೆಳಕೇರಿ)

ದಿನಾಂಕಃ **02.11.2023**

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.

## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆ: 935/2019**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

**ವಿರುದ್ಧ,**

ಆರೋಪಿ/ಗಳು ಃ ಎ 5. ಸಣ್ಣತಾಯಮ್ಮ,
ತಂದೆ - ಪಾಪೇಗೌಡ

ಭಾರತೀಯ ದಂಡ ಸಂಹಿತೆ ಕಲಂ **240(2)** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ತಪ್ಪೊಪ್ಪಿಕೊಳ್ಳುವಿರೋ, ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

(ಪೂಜಾ ಬೆಳಕೇರಿ)
ದಿನಾಂಕಃ **02.11.2023** ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದಂ.ನ್ಯಾ.. ದಂಡಾಧಿಕಾರಿಗಳು, ಹುಣಸೂರು.